ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ

1610 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಬೇಸಿಗೆಯಲ್ಲಿ ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಪ್ರಸ್ತುತ ಬೇಸಿಗೆಯಲ್ಲಿ ಕೋಲಾರ ಜಿಲ್ಲೆಯ ಕೆಲವು ಗ್ರಾಮ:ಜನವಸತಿಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಸಮಸ್ಯೆ ಪರಿಹಾರಕ್ಕಾಗಿ ಸರ್ಕಾರದಿಂದ ರೂ. 50.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮತ್ತು ರೂ.40.00 ಲಕ್ಷಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಒಟ್ಟು ರೂ. 90.00 ಲಕ್ಷಗಳನ್ನು ಕೋಲಾರ ಜಿಲ್ಲೆಗೆ ದಿನಾಂಕ: 31-3-98ರಂದು ಬಿಡುಗಡೆ ಮಾಡಲಾಗಿದೆ. ಮತ್ತು ಈ ಅನುದಾನವನ್ನು ಕುಡಿಯುವ ನೀರಿನ ಅಭಾವ ಎದುರಿಸುತ್ತಿರುವ ಗ್ರಾಮ:ಜನವಸತಿಗಳಲ್ಲಿ ಮುಖ್ಯವಾಗಿ ಹಾಲಿ ಯೋಜನೆಗಳ ಪುನ:ಶ್ಚೇತನ ಕಾಮಗಾರಿಗಳಿಗಾಗಿ ಮತ್ತು ಅನಿವಾರ್ಯ ಪ್ರಸಂಗಗಳಲ್ಲಿ ಹೊಸ ಕೊಳವೆಬಾವಿಗಳನ್ನು ಕೊರೆಯುವುದಕ್ಕಾಗಿ ಬಳಸಲು ಜಿಲ್ಲಾಪಂಚಾಯತಿಗೆ ನಿರ್ದೇಶಿಸಲಾಗಿದೆ.

ಕುಡಿಯವ ನೀರಿನ ಸರಬರಾಜಿಗೆ ಡ್ಯಾನಿಡಾ ನೆರವು.

1611 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡ್ಯಾನಿಡಾ ವತಿಯಿಂದ ಪ್ರದೇಶದಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಎಷ್ಟು ನೆರವು ಪಡೆಯಲಾಗಿದೆ?

ಆ) ಕೋಲಾರ ಜಿಲ್ಲೆಯ ಎಷ್ಟು ಗ್ರಾಮ ಪಂಚಾಯತಿಗಳನ್ನು ಈ ಯೋಜನೆಗೆ ಒಳಪಡಿಸಿದೆ (ವಿವರ ನೀಡುವುದು)

ಇ) ಒಳಪಡಿಸಿದ ಹಳ್ಳಿಗಳಲ್ಲಿ ಈ ಯೋಜನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಈಗ ಅನುಷ್ಠಾನಗೊಳಿಸುತ್ತಿರುವ ಗ್ರಾಮೀಣ ಕುಡಿಯುವ ನೀರು ಸರಬರಾಜಿನ ಯೋಜನೆಗೆ ಡ್ಯಾನಿಡಾ ವತಿಯಿಂದ ರೂ. 39.30 ಕೋಟಿಗಳಷ್ಟು ನೆರವು ಪಡೆಯಲಾಗುವುದು. ಯೋಜನೆಯ ವಿವರ ಈ ಕೆಳಕಂಡಂತಿದೆ.

ಯೋಜನೆ ವೆಚ್ಚ	ರೂ.	61.00
ಡೆನ್‌ಮಾರ್ಕ್ ಸರ್ಕಾರದ ನೆರವು	ರೂ.	39.30
ಕರ್ನಾಟಕ ಸರ್ಕಾರದ ವತಿಯಿಂದ	ರೂ.	11.70
ಸಿಬ್ಬಂದಿ ವೆಚ್ಚ (ಕರ್ನಾಟಕ ಸರ್ಕಾರದ ವತಿಯಿಂದ)	ರೂ.	3.62
ಒಟ್ಟು ವೆಚ್ಚ	**ರೂ.**	**54.62**

ಆ) ಯೋಜನಾ ಅವಧಿಯಲ್ಲಿ ಕೋಲಾರ ಜಿಲ್ಲೆಯ 100 ಗ್ರಾಮ ಪಂಚಾಯತಿಗಳನ್ನು ಬೇಡಿಕೆ ಆಧಾರದ ಮೇಲೆ ಈ ಯೋಜನೆಯಲ್ಲಿ ಅಳವಡಿಸಲು ಯೋಜಿಸಲಾಗಿದೆ. ಪ್ರಸ್ತುತ ಕೋಲಾರ ಜಿಲ್ಲೆಯಲ್ಲಿನ ಮೂರು ತಾಲ್ಲೂಕುಗಳ (ಗುಡಿಬಂಡೆ, ಬಂಗಾರಪೇಟೆ ಹಾಗೂ ಮುಳಬಾಗಿಲು) ಒಟ್ಟು 47 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಗ್ರಾಮ ಪಂಚಾಯತಿಗಳ ವಿವರ ಹೀಗಿದೆ.

ಗುಡಿಬಂಡೆ ತಾಲ್ಲೂಕು

1. ತಿರುಮಣಿ
2. ಸೋಮೇನಹಳ್ಳಿ
3. ವರ್ಣಕೊಂಡ
4. ಬೀಚಗಾನಹಳ್ಳಿ
5. ಹಂಪಸಂದ್ರ
6. ಉಲ್ಲೋಡು
7. ಎಲ್ಲೋಡು

ಬಂಗಾರಪೇಟೆ ತಾಲ್ಲೂಕು

1. ಕಂಗಾಂಡ್ಲಹಳ್ಳಿ
2. ಬೂದಿಕೋಟೆ
3. ಡಿ.ಕೆ. ಹಳ್ಳಿ
4. ಗೊಲ್ಲಹಳ್ಳಿ
5. ಹುಲಿಬೆಲೆ
6. ದೊಡ್ಡವಲಗಮಾದಿ
7. ಫಟ್ಟಮೊದಮಂಗಲ
8. ವೆಂಗಸಂದ್ರ
9. ಜಕ್ಕರಸಕೊಪ್ಪ
10. ಎ. ಜೋತೆಹಳ್ಳಿ
11. ರಾಮಸಾಗರ
12. ಚಿನ್ನಕೋಟೆ

ಮುಳಬಾಗಿಲು ತಾಲ್ಲೂಕು

1. ಮುಡಿಯನೂರು
2. ಕಪಲಮಡಗು
3. ತಾಯಲೂರು
4. ಕುರುಡು ಮಲೆ
15. ನಂಗಲಿ
16. ಗಮ್ಮಕಲ್ಲು
17. ದೂಲಪ್ಪಲ್ಲಿ
18. ಉತ್ತನೂರು

5. ಅವಣಿ	19. ರಾಜೇಂದ್ರಹಳ್ಳಿ
6. ತಿಮ್ಮರಾವುತನಹಳ್ಳಿ	20. ಹನುಮನಹಳ್ಳಿ
7. ಎಮ್ಮೇನತ್ತ	21. ಮಲ್ಲನಾಯಕನಹಳ್ಳಿ
8. ದೇವರಾಯಸಮುದ್ರ	22. ಮೋತಕಪಲ್ಲಿ
9. ಹೆಚ್.ಗೊಲ್ಲಹಳ್ಳಿ	23. ಬಲ್ಲ
10. ಅಗರ	24. ಬೈರಕೂರು
11. ಗುಡಿಪಲ್ಲಿ	25. ಅಂಚಿಕಲೆ
12. ಸೊನ್ನವಾಡಿ	26. ಪಿಚ್ಚಗುಂಟ್ಲಹಳ್ಳಿ
13. ಊರುಕೊಂಟೆಮಿಟ್ಟೂರು	27. ಮುಸ್ತೂರು
14. ಅಂಗೊಂಡಹಳ್ಳಿ	28. ಅಲಂಗೂರು

ಇ) ಯೋಜನೆಯಲ್ಲಿ ಆಳವಡಿಸಿರುವ ಹಳ್ಳಿಗಳಲ್ಲಿ ಈ ಯೋಜನೆಯ ಪ್ರಾರಂಭಿಕ ಕೆಲಸ ಕಾರ್ಯಗಳು ಪ್ರಗತಿಯಲ್ಲಿದ್ದು ಯೋಜನೆಯ ವಿನ್ಯಾಸ. ಅಂದಾಜು, ಜಲಮೂಲ ಸ್ಥಾಪನೆ ಇತ್ಯಾದಿ ಕಾರ್ಯಗಳು ಪ್ರಗತಿಯಲ್ಲಿವೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ತಯಾರಿಕೆ ಹಂತದಲ್ಲಿದೆ ಹಾಗೂ ಜಲಮೂಲ ಸ್ಥಾಪನೆ ಕಾರ್ಯಪ್ರಗತಿಯಲ್ಲಿದೆ.

ಈ) ಯೋಜನೆಯು ಗ್ರಾಮಗಳ ಬೇಡಿಕೆ ಮತ್ತು ಪಾಲ್ಗೊಳ್ಳುವಿಕೆ ಆಧಾರದ ಮೇಲೆ ಅನುಷ್ಠಾನಗೊಳಿಸುವುದಾಗಿದೆ.

ಶೇಕಡ 5ರಷ್ಟು ಬಂಡವಾಳ ವೆಚ್ಚವನ್ನು ಗ್ರಾಮ ಪಂಚಾಯತಿಗಳು ಭರಿಸಬೇಕಾಗಿರುವುದರಿಂದ ಯೋಜಿಸಿದಂತೆ ಗ್ರಾಮ ಪಂಚಾಯತಿಗಳಲ್ಲಿ ಶೇಕಡಾ 5ರಷ್ಟು ಬಂಡವಾಳ ಸಂಗ್ರಹಿಸಲು ವಿಳಂಬವುಂಟಾಗುವುದು.

ಪ್ರಾರಂಭದಲ್ಲಿ ಯೋಜನೆಯಲ್ಲಿ ಭಾಗವಹಿಸಲು ಗ್ರಾಮ ಪಂಚಾಯತಿಗಳು ಆಸಕ್ತಿ ತೋರಿಸುವಲ್ಲಿ ಹಾಗೂ ಶೇಕಡಾ 5ರಷ್ಟು ಬಂಡವಾಳ ವೆಚ್ಚ ಭರಿಸುವಲ್ಲಿ ಸಾಕಷ್ಟು ಸಮಯ ತೆಗೆದುಕೊಂಡಿದೆ.

ಬಾಗೇಪಲ್ಲಿ ಪಟ್ಟಣದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗೆ ಸ್ವಂತ ಕಟ್ಟಡ ನಿರ್ಮಿಸುವುದು.

1612 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪ್ರಾಥಮಿಕ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ಪಟ್ಟಣದಲ್ಲಿ ನೂತನವಾಗಿ ಪ್ರಾರಂಭಿಸಿರುವ ಸರ್ಕಾರಿ ಪಾಲಿಟೆಕ್ನಿಕ್ ಸ್ವಂತ ಕಟ್ಟಡವಿಲ್ಲದೆ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂಸ್ಥೆಗೆ ಸರ್ಕಾರಿ ಕಟ್ಟಡ ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?